**Spl.C. 5005/2019**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 4

**ಪಿ ಡಬ್ಲೂಃ** 3

| | |
|---|---|
| ಸಾಕ್ಷಿಯ ಹೆಸರು - | ಚಂದ್ರಿಕಾ ಎನ್ |
| ಗಂಡನ ಹೆಸರು - | ನಾಗರಾಜ |
| ವಯಸ್ಸು - | 30 ವರ್ಷ |
| ಉದ್ಯೋಗ - | ನಿವೃತ್ತ ಸರ್ಕಾರಿ ನೌಕರ |
| ವಾಸಸ್ಥಳ - | ದಾವಣಗೇರೆ |

**ಸಾಕ್ಷಿಯನ್ನು ದಿನಾಂಕಃ** 07-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ. ಪಿ. ಅವರಿಂದ**

ದಿಃ **09-05-2014** ರಂದು ನಾನು ದಾವಣಗೆರೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ದೇವದಾಸಿ ಪುನರ್ ವಸತಿ ಯೋಜನೆ ಅಡಿ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ.

ಆ ಸಮಯದಲ್ಲಿ ಮೇಲಾಧಿಕಾರಿಗಳಾದ ಚಾಸಾ **-5** ರವರು ಹನುಮಕ್ಕ ಎಂಬುವವರ ಸಾಲದ ಅರ್ಜಿಯ ದಾಖಲೆಗಳನ್ನು ಸಿ ಡಿ ಪಿ ಓ ಕಚೇರಿಗೆ ತಲುಪಿಸುವಂತೆ ನೀಡಿದ ಸೂಚನೆ ಅನ್ವಯ ನಾನು ಝುರಾಕ್ಸ್ ಪ್ರತಿ ಮಾಡಿಸಿ ದಾಖಲೆ ಒದಗಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ನಿಪಿಃ **56** ಎಂದು ಗುರುತಿಸಲಾಯಿತು. ಪುಟ ಸಂಖ್ಯೆಃ **83** ರಿಂದ **89.** ಈ ಸಂಬಂಧ ಸ್ವೀಕೃತಿ ಪಡೆದುಕೊಂಡಿದ್ದು, ಅದನ್ನು ನಿಪಿಃ **57** ಎಂದು ಗುರುತಿಸಲಾಯಿತು. ಅಲ್ಲಿ ಒಂದು ಧ್ವನಿಯನ್ನು ಕೇಳಿಸಿದ್ದು, ಅದು ಆರೋಪಿಗೆ ಸಂಬಂಧಿಸಿದ ಧ್ವನಿಯಾಗಿತ್ತು. ಅದರಲ್ಲಿ ಆರೋಪಿ ಲೋನ್ ಮಾಡಿಸಿಕೊಟ್ಟ ಬಗ್ಗೆ ರೂ. **1,000/-** ಲಂಚಕ್ಕೆ ಬೇಡಿಕೆ ಇಟ್ಟಿದ್ದ.

ಈ ಸಂಬಂಧ ನಿಪಿಃ 3 ಪಂಚನಾಮೆ ಜರುಗಿಸಿದ್ದು, ನಿಪಿಃ 3 (ಡಿ) ನನ್ನ ಸಹಿ ಆಗಿರುತ್ತದೆ. ಆ ಸಮಯದಲ್ಲಿ ತೆಗೆದ ಪೋಟೋಗಳು ನಿಪಿಃ 50 ಆಗಿರುತ್ತದೆ. ಸಾಕ್ಷಿ ಆರೋಪಿಯನ್ನು ಗುರುತಿಸಿದ್ದಾರೆ. ಆತ ಯೋಜನಾ ಅನುಷ್ಠಾನ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ  ಜಿ ವಿ ಪಿ., ವಕೀಲರಿಂದಃ</u>**

ಆರೋಪಿ ಖಾಸಗಿ ಏಜೆನ್ಸಿ ಯಿಂದ ನೇಮಕಾತಿ ಆಗಿದ್ದ ಅಂದರೆ ಸರಿ. ಆತ ಹಳ್ಳಿಗಳಲ್ಲಿ ಬೀದಿ ನಾಟಕ ಮಾಡಿ ಮಾಹಿತಿ ನೀಡುತ್ತಿದ್ದ ಅಂದರೆ ಸರಿ. ಹುಚ್ಚಳ್ಳಿ ಗ್ರಾಮದಲ್ಲಿ ಗೌರಮ್ಮ ಎಂಬಾಕೆಯನ್ನು ದೇವದಾಸಿ ಮಾಡಿದ ವಿಚಾರವಾಗಿ ಗಲಾಟೆಯಾಗಿತ್ತು ಅಂದರೆ ಸರಿ. ಆರೋಪಿ ಸದರಿ ಗ್ರಾಮಕ್ಕೆ ಹೋಗಿ ಅವರ ಮನವೊಲಿಸಿ ಅದನ್ನು ನಿಲ್ಲಿಸಿದ್ದ ಅಂದರೆ ಸರಿ. ಆತನ ಕಾರ್ಯ ವೈಖರಿಗೆ ಪ್ರಶಸ್ತಿ ಬಂದಿದೆ ಅಂದರೆ ಸರಿ.

ಪೋಲಿಸರು ನನ್ನ ಹೇಳಿಕೆ ದಾಖಲಿಸಿಲ್ಲ. ನಾನು ಯಾವುದೇ ಲಂಚದ ಬೇಡಿಕೆಯ ಧ್ವನಿಯನ್ನು ಕೇಳಿಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಂದೆ ಲ್ಯಾಪ್ ಟಾಪ್ ಬಿಟ್ಟು ಯಾವುದೇ ವಾಯಸ್ ರೆಕಾರ್ಡರ್ ಪ್ಲೇ ಮಾಡಿಲ್ಲ. ಬೇರೆ ಬೇರೆ ವ್ಯಕ್ತಿಗಳ ಧ್ವನಿಗಳೊಂದಿಗೆ ಮಿಶ್ರಣ ಮಾಡಿ ಆರೋಪಿಯ ಧ್ವನಿ ಕೇಳಿಸಿಲ್ಲ.

ಸರ್ಕಾರದಿಂದ ಫಲಾನುಭವಿಗಳ ಖಾತೆಗೆ ಹಣ ಜಮೆ ಆಗಿತ್ತು ಅಂದರೆ ಸರಿ. ನಾನು ಮಹಜರ್ ಗೆ ಸಿ ಡಿ ಪಿ ಓ ಕಚೇರಿಯಲ್ಲಿ ಸಹಿ ಮಾಡಿದ್ದೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಈ ಹಿಂದೆ ಈ ರೀತಿಯ ಘಟನೆ ನಡೆದಿಲ್ಲ ಅಂದರೆ ಸರಿ. ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪೋಟೋ ಎಲ್ಲಿ ತೆಗೆದರು ಎಂದು ನನಗೆ ಗೊತ್ತಿಲ್ಲ.

**Spl.C. 5005/2019**

**ಸಿ ಡಬ್ಲೂಃ 4**

**ಪಿ ಡಬ್ಲೂಃ 3**

ಆ ದಿನ ಆರೋಪಿ ಕಚೇರಿಯಲ್ಲಿಯೇ ಇರಲಿಲ್ಲ, ಯಾವುದೇ ದಾಖಲೆ ಕೊಟ್ಟಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.